(ಒ) ಜಿಗಣಿ ಇಂಡಸ್ಟ್ರೀಸ್ ಎಸ್ಟೇಟ್ ಕಾರ್ಖಾನೆಗಳು ಮುಚ್ಚಿರುವುದರ ಬಗ್ಗೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಸನ್ಮಾನ್ಯಅಧ್ಯಕ್ಷರೆ, ಬೆಂಗಳೂರಿನ ಸುತ್ತಮುತ್ತ ಇರುವಂತಹ ಜಿಗಣಿ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಸುಮಾರು ಕಾರ್ಖಾನೆಗಳನ್ನು ಮುಚ್ಚಿ ಸಾವಿರಾರು ಜನ ಕಾರ್ಮಿಕರನ್ನು ಬೀದಿಗೆ ತಳ್ಳಿದ್ದಾರೆ. ಆದರ ವಿರುದ್ಧ ಕಳೆದ ತಿಂಗಳು ಅಂದರೆ ದಿನಾಂಕ 28. 2. 1998 ರಿಂದ ಆ ಕಾರ್ಮಿಕರು ಅನಿರ್ಧಿಷ್ಟ ಕಾಲದ ಧರಣಿ, ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಆ ರೀತಿ ಧರಣಿ, ಸತ್ಯಾಗ್ರಹ ನಡೆಸುತ್ತಿರುವವರ ಮೇಲೆ ಪೋಲೀಸರು ಮತ್ತು ಮ್ಯಾನೇಜ್‌ಮೆಂಟ್‌ನವರು ಒಂದಾಗಿ ಸುಳ್ಳು ಮೊಕದ್ದಮೆಗಳನ್ನು ಹಾಕಿಸಿ ಅವರ ಮೇಲೆ ತೀವ್ರ ರೀತಿಯ ಹಿಂಸೆ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರು ಮೂರು - ನಾಲ್ಕು ತಿಂಗಳುಗಳು ಕೆಲಸ ಮಾಡಿದರೂ ಕೂಡ ಆ ಕಾರ್ಖಾನೆಯ ಮಾಲೀಕರು ಕಾರ್ಮಿಕರಿಗೆ ಸಂಬಳವನ್ನು ಕೊಡುತ್ತಿಲ್ಲ. ಕಾರ್ಮಿಕರು ಸಂಬಳ ಕೇಳುವುದಕ್ಕೆ ಹೋದರೆ ನೀವು ರಾಜೀನಾಮೆ ಕೊಡಿ, ನಾವು ಸಂಬಳವನ್ನು ಕೊಡುತ್ತೇವೆ ಎಂದು ಕಾರ್ಮಿಕರ ಮೇಲೆ ಒತ್ತಡ ಮಾಡುತ್ತಿದ್ದಾರೆ. ಈ ರೀತಿಯಾಗಿ ಆ ಜಿಗಣಿ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿರುವ ಸಣ್ಣ ಪುಟ್ಟ ಎಲ್ಲಾ ಕಾರ್ಖಾನೆಗಳೂ ಇವತ್ತು ಮುಚ್ಚುತ್ತಕ್ಕಂತಹ ಹುನ್ನಾರವನ್ನು ಆ ಮಾಲೀಕರು ಮಾಡಿ ಸಾವಿರಾರು ಜನ ಕಾರ್ಮಿಕರನ್ನು ಬೀದಿಗೆ ತಳ್ಳುವಂತಹ ಒಂದು ವ್ಯವಸ್ಥಿತವಾದ ಪಿತೂರಿಯನ್ನು ಮಾಡುತ್ತಿದ್ದಾರೆ. ಇದು ಇಲ್ಲಿ ನಿರಂತರವಾಗಿ ನಡೆಯುತ್ತಿದೆ. ಈ ಬಗ್ಗೆ ಕಾರ್ಮಿಕ ಸಂಘಗಳು, ಕಾರ್ಮಿಕ ಇಲಾಖೆಯ ಮುಖಾಂತರ ಸರ್ಕಾರಕ್ಕೆ ಮನವಿ ಪತ್ರಗಳನ್ನು ಕೊಟ್ಟಿದ್ದರೂ ಇದುವರೆಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಸರ್ಕಾರವಾಗಲಿ, ಕಾರ್ಮಿಕ ಇಲಾಖೆಯವರಾಗಲಿ ತೆಗೆದುಕೊಂಡಿಲ್ಲ. ಇದರಿಂದಾಗಿ ಈಗ ಸಾವಿರಾರು ಜನ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಇದರ ಬಗ್ಗೆ ತಕ್ಷಣ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದರ ಬಗ್ಗೆ ಆಲೋಚನೆ ಮಾಡಬೇಕು. ಮತ್ತು ಕಾರ್ಮಿಕರು ಮಾಲೀಕರು ಬೇಕಾಬಿಟ್ಟಿಯಾಗಿ ವರ್ತಿಸಿ ಅವರಿಗಿಷ್ಟ ಬಂದ ರೀತಿಯಲ್ಲಿ ಕಾರ್ಖಾನೆಗಳನ್ನು ಮುಚ್ಚಿ ಕಾರ್ಮಿಕರನ್ನು ಬೀದಿಗೆ ತಳ್ಳುವುದಕ್ಕೆ ತಾವು ಖಂಡಿತ ಅವಕಾಶ ಮಾಡಿಕೊಡಬಾರದು. ಆ ಕಾರ್ಖಾನೆಗಳು ಉಳಿಯಬೇಕು. ಎರಡನೆಯದಾಗಿ, ಕಾರ್ಮಿಕರಿಗೆ ಕೊಡಬೇಕಾದಂತಹ ಸಂಬಳವನ್ನು ಕೊಡಿಸಬೇಕು ಹಾಗೂ ಅವರ ಮೇಲೆ ಹಾಕಿರುವ ಕೇಸ್‌ಗಳನ್ನು ವಾಪಸ್ ಪಡೆಯಬೇಕೆಂದು ನಾನು ನಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಕಾರ್ಖಾನೆಯ ಮಾಲೀಕರು ಅಲ್ಲಿನ ಕಾರ್ಮಿಕರಿಗೆ ಸಂಬಳ ಕೊಡುತ್ತಿಲ್ಲ, ಆದ್ದರಿಂದ ಅವರು ಮುಷ್ಕರ ಮಾಡುತ್ತಿದ್ದಾರೆ. ಮಾಲೀಕರು ಅವರ ಮೇಲೆ ಮೊಕ್ಕದ್ದಮೆಗಳನ್ನು ಹಾಕುತ್ತಿದ್ದಾರೆ, ಅವುಗಳನ್ನು ಹಿಂದಕ್ಕೆ ಪಡೆಯಬೇಕು ಎನ್ನುವ ವಿಚಾರಗಳನ್ನು ಅವರು ಹೇಳಿದ್ದಾರೆ. ನಾನು ತಮಗೆ ಈಗಾಗಲೇ ಈ ಸದನದಲ್ಲಿ ಭರವಸೆಯೊಂದನ್ನು ಕೊಟ್ಟಿದ್ದೇನೆ. ಬಹುಶ: ಮೊಕದ್ದಮೆಗಳನ್ನು ಹಾಕುತ್ತಿರುವುದು ಒಂದು ಭಾಗವಾದರೆ ಈಗ ಅಲ್ಲಿ ನಡೆಯುತ್ತಿರುವ ಪರಿಸ್ಥಿತಿ ಇನ್ನೊಂದು ಭಾಗ. ಈ ವಿಷಯವನ್ನು ಪೋಲೀಸ್ ಅಧಿಕಾರಿಗಳಿಗೆ ತಿಳಿಸಿ ಅಲ್ಲಿ ನಡೆಯುತ್ತಿರುವ ಘಟನೆ ಏನು, ಅದರ ಹಿನ್ನೆಲೆ ಏನು? ಯಾವುದಾದರೂ ಮೊಕ್ಕದ್ದಮೆಗಳನ್ನು ದಾಖಲು ಮಾಡಿದ್ದಾರೆಯೆ ಎಂಬುದನ್ನು ಸಂಬಂಧಪಟ್ಟ ಮಾಹಿತಿ ತರಿಸಿ ಸಾಧ್ಯವಾದರೆ ಮಂಗಳವಾರ ಅಥವಾ ಬುಧವಾರದ ದಿನ ನಾನೇ ನೇರವಾಗಿ ಶ್ರೀ ರಾಮರೆಡ್ಡಿಯವರ ಜೊತೆಯಲ್ಲಿ ಮಾತನಾಡುತ್ತೇನೆ. ಇನ್ನು ಕಾರ್ಮಿಕ ಇಲಾಖೆಯಲ್ಲಿ ಮನವಿ ಪತ್ರ

ಸಲ್ಲಿಸಿರುವುದನ್ನು ಕುರಿತಂತೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಅಲ್ಲಿರುವ ವಿಚಾರವನ್ನು ತಿಳಿಸಿ ಅದಕ್ಕೆ ಯಾವ ರೀತಿ ವ್ಯವಸ್ಥೆ ಮಾಡುತ್ತೇವೆ ಎಂಬ ಬಗ್ಗೆ ಉತ್ತರವನ್ನು ಕೊಡುತ್ತೇನೆ. ಮತ್ತೆ ಪೋಲೀಸ್ ಕಾರ್ಮಿಕರ ಮೇಲೆ ಮೊಕ್ಕದ್ದಮೆಗಳನ್ನು ದಾಖಲು ಮಾಡಿಕೊಂಡಿರುವ ವಿಚಾರದ ಬಗ್ಗೆಯೂ ಕೂಡ ಮಾಹಿತಿಯನ್ನು ತರಿಸಿ ನಿಮಗೆ ಮಂಗಳವಾರ ಅಥವಾ ಬುಧವಾರ ಸದನದಲ್ಲಿ ಉತ್ತರವನ್ನುಕೊಡುತ್ತೇನೆ.

(ಓ) <u>ಮೈಸೂರು ಕಾಗದದ ಕಾರ್ಖಾನೆಯಲ್ಲಿ ವಿದೇಶಿ ಪಲ್ಪ್ ಖರೀದಿಗೆ ಸಂಬಂಧ ಪಟ್ಟಂತೆ</u>

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :- ಮಾನ್ಯ ಅಧ್ಯಕ್ಷರೆ, ಮೈಸೂರು ಕಾಗದ ಕಾರ್ಖಾನೆಯಲ್ಲಿ ವಿದೇಶಿ ಪಲ್ಪ್ ಖರೀದಿಯಲ್ಲಿ ಮತ್ತು ಪೇಪರ್ ಮಾರಾಟದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿರುವಂಥ ಅನೇಕ ದಾಖಲೆಗಳು ನಮ್ಮ ಹತ್ತಿರ ಇದೆ. ಇದರ ಬಗ್ಗೆ ನಿಲುವಳಿ ಸೂಚನೆಯನ್ನು ನಾನು ಶ್ರೀಮತಿ ಪ್ರಮೀಳಾರವರು, ಸುರೇಶ್ ಕುಮಾರ್‌ರವರು, ಆರಗ ಜ್ಞಾನೇಂದ್ರರವರು, ಸದಾನಂದಗೌಡರು ತಮಗೆ ಕಳುಹಿಸಿದ್ದೇವು. ಆದರೆ ಈಗ ತಾವು ಪ್ರಸ್ತಾಪ ಮಾಡಬೇಕು ಎಂದು ಹೇಳಿದ್ದಕ್ಕೋಸ್ಕರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಏನಾಗಿದೆ, ಒಂದು ಶ್ರೀ ರಂಗ....

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) :- ಈಗ ನಾನು ಈ ಡಾಕ್ಯುಮೆಂಟ್ಸ್ ಎಲ್ಲಾ ನೋಡಿದೆ ಅಧ್ಯಕ್ಷರೇ. ಇದನ್ನೇ ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಿ ಮುಗಿಸುವ ವಿಚಾರವಲ್ಲ. ಭಾರಿ ಭಾರಿ ಡಾಕ್ಯುಮೆಂಟ್ ಇದೆ.

ಅಧ್ಯಕ್ಷರು :- ನನ್ನನ್ನು ಕಛೇರಿಯಲ್ಲಿ ಕಂಡು ಭೇಟಿಯಾದರು. ಅವರಿಗೆ ನಾನು ಅಡ್ವೈಸ್ ಮಾಡಿದ್ದು ಏನೆಂದರೆ, ಜೀರೋ ಅವರ್‌ನಲ್ಲಿ ಇದನ್ನು ಏಕೆ ಮೆನ್‌ಷೆನ್ ಮಾಡಿ ಎಂದು ಹೇಳಿದೆನೆಂದರೆ the immediate relief that you are asking for the Government will examine and give their mind to you. We can take up the subject for discussion under Rule 69 sometime later. That is why I have allowed him to make a mention.

ಶ್ರೀ ಕೆ. ಎಸ್. ಈಶ್ವರಪ್ಪ :- ಮಾನ್ಯ ಅಧ್ಯಕ್ಷರೇ, ನಾನು ಏಕೆ ಪ್ರಸ್ತಾಪ ಮಾಡುತ್ತೇನೆ ಎಂದರೆ ಈ ಪಲ್ಪ್ ಖರೀದಿಯಲ್ಲಿ ಶ್ರೀ ರಂಗ ಮರ್ಕೆಂಟೈಲ್ ಇಂಡಿಯಾ ಎನ್ನುವ ಸಂಸ್ಥೆಯ ಜೊತೆಗೆ..

ಅಧ್ಯಕ್ಷರು :- ಇದು ಯಾವ ರಂಗ? ಅಲ್ಲಿ ಮೊನ್ನೆಯೂ ಇದೇ ರಂಗ ಬಂದಿತ್ತು. ಶ್ರೀ ರಂಗ ಎಂದ ತಕ್ಷಣ ರಕ್ಷಣೆ ಸಿಗುತ್ತದೆ. ಎಂದು ಎಲ್ಲರಿಗೂ ಅನ್ನಿಸಿಬಿಟ್ಟಿದೆ. ಹಾಗಾಗಿ ಈ ಸಂಸ್ಥೆ ಸಿ ಎಂಡಿ ಯಾರ್ಯಾರು ಆಗಿರುತ್ತಾರೆ. ಅವರೆಲ್ಲರನ್ನೂ ಕೂಡ ತೃಪ್ತಿ ಪಡಿಸಿಕೊಂಡು ಬಂದಿದ್ದಾರೆ ಅನೇಕ ವರ್ಷಗಳಿಂದ. ಆ ಸಂಸ್ಥೆ ಬ್ಯಾಡ್ ಪರ್ಚೇಸರ್ ಎಂದು ರಿಪೋರ್ಟ್ ಕೂಡ ಅವರ ಅಧಿಕಾರಿಗಳಿಗೆ ಕೊಟ್ಟು ಕೊಂಡು ಬಂದಿರುವ ದಾಖಲೆಗಳು ಕೂಡ ನನ್ನ ಹತ್ತಿರ ಇವೆ. ಸುಮಾರು 9 ಕೋಟಿ ರೂಪಾಯಿಯಷ್ಟು ಹಿಂದಿನ ಫಲ್ಪ್ ಖರೀದಿಯನ್ನು ಈ ಒಂದು ಸಂಸ್ಥೆಗೆ ನಷ್ಟವಾಗಿದೆ ಎನ್ನುವ ದಾಖಲೆಗಳೂ ಕೂಡ ಇವೆ. ಅದೇ ರೀತಿ ಖರೀದಿ ಮಾಡುವ ಸಂದರ್ಭದಲ್ಲೂ ಯಾವುದೇ ನೀತಿ ನಿಯಮಗಳನ್ನು ಪರಿಪಾಲನೆ ಮಾಡಿಲ್ಲ. ಮತ್ತೆ ಅವರು ಸಪ್ಲೈ ಮಾಡುವ ಮೆಟೀರಿಯಲ್‌ಗೆ ಥರ್ಡ್ ಪಾರ್ಟಿ ಸೂಪರ್‌ವಿಷನ್ ಎನ್ನುವಂಥ ಪಾಲಿಸಿ ಇದೆ. ಇನ್‌ಸಪೆಕ್ಷನ್‌ಗೋಸ್ಕರ. ಆದರೆ ಆ ಪಾಲಿಸಿಯನ್ನು ಇವತ್ತು ತೆಗೆದುಹಾಕುತ್ತೇವೆ ಎನ್ನುವ